Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 166 ಕರೀಸಂದ್ರ, ವಾರ್ಡ್ ಕಛೇರಿ, ಬೆಂಗಳೂರು,**

---

**ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: 21.05.2022 ರಂದು ಬೆಳಗ್ಗೆ 11:00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

***ಹಾಜರಿದ್ದ ಅಧಿಕಾರಿಗಳು :-***

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ನವೀನ್ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ಕಿಯೋನಿಕ್ಸ್) (ವಾರ್ಡ್ 166 ಕರೀಸಂದ್ರ)
3. ಶ್ರೀ. ನರಸಿಂಹಲು – ಹಿ.ಆ.ಪ– (ವಾರ್ಡ್ 166 ಕರೀಸಂದ್ರ)
4. ಶ್ರೀ ಸೈಯ್ಯದ್ – ಕಿ.ಅ., ಬೆಂಗಳೂರು ನೀರು & ಒಳಚರಂಡಿ ಮಂಡಳಿ
5. ಶ್ರೀ. ಬಾಬು – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) (ವಾರ್ಡ್ 166 ಕರೀಸಂದ್ರ)
6. ಘನತ್ಯಾಜ್ಯವಸ್ತು ವಿಲೇವಾರಿ ಸೂಪರ್‌ವೈಸರ್‌ಗಳು– (ವಾರ್ಡ್ 166 ಕರೀಸಂದ್ರ)
7. ಶ್ರೀ. ರಾಜಶೇಖರ್ – ಕಂದಾಯ ಪರಿವೀಕ್ಷಕರು (ವಾರ್ಡ್ 166 ಕರೀಸಂದ್ರ)
8. ಶ್ರೀ. ರವಿಕುಮಾರ್ – ಕಿರಿಯ ಅಭಿಯಂತರರು (ಬೆಸ್ಕಾಂ)
9. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಇಲಾಖೆ ಜಯನಗರ/ಬನಶಂಕರಿ ಪೊಲೀಸ್ ಅಧಿಕಾರಿಗಳು.
10. 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

–––––

ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು. ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಈ ಹಿಂದಿನ ಸಭೆಯಲ್ಲಿ ನಡೆಯದ ವಿಷಯಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿರುವಂತೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡಿರುವ ಕ್ರಮದ ಬಗ್ಗೆ ವಾರ್ಡ್ ಸಂಖ್ಯೆ–166ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರಿಗೆ ಪರಾಮರ್ಶೆಗಾಗಿ ವಿವರಿಸುವಂತೆ ಸೂಚಿಸಲಾಯಿತು.

ಹಾಗೂ ಅಧಿಕಾರಿಗಳು ಸಭೆಯಲ್ಲಿ ಕಾರ್ಯಗತಗೊಳ್ಳದ ಕೆಲಸಕಾರ್ಯಗಳನ್ನು ಚಾಚು ತಪ್ಪದೇ ನಿಗಧಿತ ಅವಧಿಯೊಳಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಗಂಭೀರವಾಗಿ ಪರಿಗಣಿಸುವಂತೆ ಸೂಚಿಸಲಾಯಿತು.

ಮುಂದುವರೆದು, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

❖ **ಕೋವಿಡ್–19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ :**

ಅಂಬೇಡ್ಕರ್‌ನಗರ, ಕಾವೇರಿನಗರ, ಪಾರ್ಕ್‌ಗಳ ಹತ್ತಿರ ಇರುವ ಕೊಳಚೆ ಪ್ರದೇಶಗಳಲ್ಲಿ ಹಾಗೂ 30ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ನಿಲ್ಲುವ ಕಸದ ಲಾರಿ ಹತ್ತಿರ ನೀರು ನಿಲ್ಲುವಂತಹ ಜಾಗಗಳ ಸುತ್ತಮುತ್ತಲು ಔಷಧಿ ಸಿಂಪಡಣೆಗೆ ಆದೇಶಿಸಲಾಯಿತು.

**ಕ್ರಮ: ಆರೋಗ್ಯಾಧಿಕಾರಿಗಳು(ಪದ್ಮನಾಭನಗರ)ವಲಯ**

ಮು.ತಿ.ನೋ..,

❖ **ವಾರ್ಡ್ ವ್ಯಾಪ್ತಿಯಲ್ಲಿ ಒಳಚರಂಡಿ ಸಂಬಂಧಿಸಿದ ವಿಷಯಗಳ ಬಗ್ಗೆ :**

ವಾರ್ಡ್ ವ್ಯಾಪ್ತಿಯಲ್ಲಿ ಬಹಳ ವರ್ಷಗಳಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಬಾಕಿ ಇರುವ ಯು.ಜಿ.ಡಿ ಕೆಲಸಕಾರ್ಯಗಳನ್ನು ತ್ವರಿತಗತಿಯಲ್ಲಿ ಮುಗಿಸಿಕೊಡಲು ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಯಿತು.

- ✓ ಕೆ.ಆರ್ ರಸ್ತೆ, ರಂಗಣ್ಣ ಮಿಲಿಟರಿ ಹೋಟೆಲ್ ಮುಂಭಾಗ ಮ್ಯಾನ್‌ಹೋಲ್ ಹಾಳಾಗಿದ್ದು ಸರಿಪಡಿಸಲು ಸೂಚಿಸಲಾಯಿತು.
- ✓ ವಾರ್ಡ್ ವ್ಯಾಪ್ತಿಯಲ್ಲಿ ಮ್ಯಾನ್‌ಹೋಲ್‌ಗಳ ಸ್ವಚ್ಚತೆ ಹಾಗೂ ನಿರ್ವಹಣೆಯ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**ಕ್ರಮ: ಸ.ಅ & ಸ.ಕಾ.ನಿ.ಅ (ಬಿಡಬ್ಲ್ಯೂಎಸ್‌ಎಸ್‌ಬಿ)**

❖ **ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ :**

- ✓ 28ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ ಮತ್ತು 17ನೇ ಇ ಅಡ್ಡರಸ್ತೆಗಳಲ್ಲಿ ರಸ್ತೆ ಬಡಿ ಪಾದಚಾರಿ ಮಾರ್ಗಗಳ ಮೇಲೆ ಅನಧಿಕೃತವಾಗಿ ಅಂಗಡಿಗಳನ್ನು ಇಟ್ಟುಕೊಂಡಿದ್ದು ಅದರಿಂದ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯುಂಟಾಗಿರುತ್ತದೆ.
- ✓ ಜಯನಗರ 7ನೇ ಬ್ಲಾಕ್ ನ 4ನೇ ಅಡ್ಡರಸ್ತೆ ಮತ್ತು 6ನೇ ಅಡ್ಡರಸ್ತೆಗಳಲ್ಲಿ ಟ್ರಾಫಿಕ್ ಸಮಸ್ಯೆ ತುಂಬಾ ಉಂಟಾಗುತ್ತಿರುವುದರಿಂದ ಸದರಿ ರಸ್ತೆಗಳನ್ನು ಏಕಮುಖ ಸಂಚಾರವನ್ನಾಗಿ ಮಾಡಲು ಸಾರ್ವಜನಿಕರು ಕೇಳಿದರು.
- ✓ ಕೃಷ್ಣ ಗ್ರಾಂಡ್ ಹೋಟೆಲ್ ಮುಂಭಾಗ ವಾಹನ ನಿಲುಗಡೆಯಿಂದ ಇತರೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯುಂಟಾಗಿರುತ್ತದೆ. ಆದ್ದರಿಂದ ಅದನ್ನು ತೆಗೆಸುವಂತೆ ಸೂಚಿಸಲಾಯಿತು.
- ✓ ಕನಕಪುರ ಮುಖ್ಯರಸ್ತೆ ಇಂದ 3ನೇ ಮುಖ್ಯರಸ್ತೆ ವರೆಗೂ ಪಾದಚಾರಿ ಮಾರ್ಗಗಳ ಮೇಲೆ ಸಣ್ಣ ಪುಟ್ಟ ಅಂಗಡಿಗಳು ಇಟ್ಟಿರುವುದರಿಂದ ಸಾರ್ವಜನಿಕ ಪಾದಚಾರಿಗಳಿಗೆ ಓಡಾಡಲು ತೊಂದರೆಯುಂಟಾಗಿರುತ್ತದೆ. ಆದರಿಂದ ಪಾದಚಾರಿಗಳ ಸುಗಮ ಓಡಾಟಕ್ಕೆ ದಾರಿ ಮಾಡಿಕೊಡಲು ಸೂಚಿಸಲಾಯಿತು.
- ✓ ಹುಣಸೆಮರ ಸಿಗ್ನಲ್‌ನಲ್ಲಿ ಟ್ರಾಫಿಕ್ ಸಮಸ್ಯೆಯಿಂದ ಘನತ್ಯಾಜ್ಯ ಇಲಾಖೆ ರವರಿಂದ ರಸ್ತೆ ಸ್ವಚ್ಚತೆಗೊಳಿಸಲು ಕಷ್ಟಕರವಾಗಿರುತ್ತದೆ ಎಂದು ತಿಳಿಸಿದರು.

**ಕ್ರಮ: ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಆರಕ್ಷಕರು (ಜಯನಗರ / ಬನಶಂಕರಿ) ವಲಯ**

❖ **ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**

- ✓ ಅಂಬೇಡ್ಕರ್ ನಗರ ಮತ್ತು ಇಂಡಸ್ಟ್ರಿಯಲ್ ಪಾಯಿಂಟ್ ಗಳಲ್ಲಿ ಡೆಬ್ರಿಸ್ ಅನ್ನು ತುರ್ತಾಗಿ ತೆಗೆಯಲು ಸೂಚಿಸಲಾಯಿತು.
- ✓ ವಾರ್ಡ್ ವ್ಯಾಪ್ತಿಯಲ್ಲಿ ಬಹಳಷ್ಟು ಪ್ರದೇಶಗಳಲ್ಲಿ ಡೆಬ್ರಿಸ್‌ಗಳ ಶೇಖರಣೆಯಾಗುತ್ತಿದ್ದು, ಸಿಲ್ಟ್ ಅಂಡ್ ಟ್ರಾಕ್ಟರ್‌ಗಳು ನಿರ್ವಹಿಸಬೇಕಾಗಿದ್ದು ಆಗಿಂದಾಗ್ಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.
- ✓ ಘನತ್ಯಾಜ್ಯ ಇಲಾಖೆ ರವರಿಂದ ಪ್ರತಿದಿನ ಮಾರ್ಷಲ್‌ಗಳು ಬದಲಾವಣೆಯಾಗುತ್ತಿರುತ್ತಾರೆ. ಸದರಿ ಬದಲಾವಣೆಯನ್ನು ನಿಲ್ಲಿಸಲು ಕೋರಿದ ಹಿನ್ನಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**ಕ್ರಮ: ಸ.ಕಾ.ನಿ.ಅ (ಘನತ್ಯಾಜ್ಯ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು**

ಮು.ತಿ.ನೋ..,

❖ **ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.**

✓ 8ನೇ ಅಡ್ಡರಸ್ತೆ, 28ನೇ ಅಡ್ಡರಸ್ತೆ, 17ನೇ ಇ ಅಡ್ಡರಸ್ತೆ, 17ನೇ ಡಿ ಅಡ್ಡರಸ್ತೆ ಮತ್ತು 1ನೇ ಎ ಮುಖ್ಯರಸ್ತೆ ಗಳಲ್ಲಿ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.

**ಕ್ರಮ: ಅರಣ್ಯ ಅಧಿಕಾರಿ (ದಕ್ಷಿಣ–ಬಿಬಿಎಂಪಿ)**

ಮಾನ್ಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ಮೇಲಿನಂತೆ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿರುವಂತೆ ಮುಂದಿನ ಸಭೆಯೊಳಗೆ ಎಲ್ಲಾ ಕೆಲಸಕಾರ್ಯಗಳನ್ನು ಕಡ್ಡಾಯವಾಗಿ ಪೂರ್ಣಗೊಳಿಸುವಂತೆ ಸೂಚಿಸಿ, ಸೂಕ್ತ ಕ್ರಮಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ. ಪ್ರದೀಪ್ ರಾಥೋಡ್
ವಾರ್ಡ್ ಸಮಿತಿ ಅಧ್ಯಕ್ಷರು,
ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ 166

ವಾರ್ಡ್ ಸಮಿತಿ ಸಂಚಾಲಕರು
ವಾರ್ಡ್ ಸಂಖ್ಯೆ 166






